ದಿ: 06-05-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ.ಕೆ.(ಎಲ್.ಎ.ಡಿ.ಸಿ) ., ವಕೀಲರಿಂದ 3 ನೇ ಆರೋಪಿತರ ಪರವಾಗಿ**:

4. ನಮ್ಮ ಕಛೇರಿಯಿಂದ ಗ್ರಾಮಾಂತರ ಪೊಲೀಸ್ ಠಾಣೆಯು 03 ಕಿ.ಮೀ. ಅಂತರ ಇರುತ್ತದೆ. ಸದರಿ ರಸ್ತೆಯಲ್ಲಿ ಸಾಕಷ್ಟು ಸರ್ಕಾರಿ ಕಛೇರಿಗಳು ಇರುತ್ತವೆ ಅಂದರೆ ನಿಜ. ನಾನು ಎಲ್ಲಾ ಪ್ರಕರಣದಲ್ಲಿ ಪಂಚರಾಗಿದ್ದೇನೆ ಅಂದರೆ ನಿಜ. ಹರಿಹರದ ಬೈ ಪಾಸ್ ರಸ್ತೆಯಲ್ಲಿ ವೈನ್ ಶಾಪ್, ಅಂಗಡಿಗಳು ಮತ್ತು ಪೆಟ್ರೋಲ್ ಬಂಕ್ ಇವೆ ಅಂದರೆ ಪೆಟ್ರೋಲ್ ಬಂಕ್ ಇಲ್ಲ, ಡಾಬಾ ಇವೆ. ಅಲ್ಲಿ ಪೆಟ್ರೋಲ್ ಬಂಕ್ ಇಲ್ಲ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಬೈ ಪಾಸ್ ರಸ್ತೆಯ ಎಡಗಡೆಯಲ್ಲಿ ಪೆಟ್ರೋಲ್ ಬಂಕ್ ಇದೆ. ಅನಗವಾಡಿ ಕ್ರಾಸ್ ನಲ್ಲಿ ಮತ್ತೊಂದು ಪೆಟ್ರೋಲ್ ಬಂಕ್ ಇದೆ ಅಂದರೆ ನನಗೆ ಗೊತ್ತಿಲ್ಲ. ಆ ಅಂಗಡಿಗಳಲ್ಲಿ ಸಿಸಿಟಿವಿ ಇದೆ ಅಂದರೆ ನಿಜ. ಆ ಬೈ ಪಾಸ್ ರಸ್ತೆಯಲ್ಲಿ ವಿಳದ್ಯೆಲೆ ಮಾರ್ಕೆಟ್ ಇದೆ ಅಂದರೆ ನಿಜ. ಅದು ಜನನಬೀಡ ಪ್ರದೇಶ ಅಂದರೆ ನಿಜ.

5. ನಿಪಿ-1 ನ್ನು ಎಷ್ಟು ಗಂಟೆಗೆ ಜಾರಿ ಮಾಡಿದರು ಅಂದರೆ ಮಧ್ಯಾಹ್ನ 12.20 ಗಂಟೆಗೆ ಮಾಡಿದರು. ಆ ಸಮಯದಲ್ಲಿ ನಿಪಿ-1 ರಲ್ಲಿ ಬರೆದಿಲ್ಲ ಅಂದರೆ ನಿಜ. ಆ ಬೈ ಪಾಸ್ ನಲ್ಲಿ ದಸ್ತು ವಾಹನ ಯಾವಾಗಲೂ ಓಡಾಡುತ್ತಿರುತ್ತದೆ ಅಂದರೆ ನಿಜ. ನಿಪಿ-3 ರಲ್ಲಿ ಯಾರೂ ID Card ಧರಿಸಿಲ್ಲ ಅಂದರೆ ನಿಜ. ನನ್ನ ಸಮಕ್ಷಮ Search list ಮಾಡಿಲ್ಲ ಸಹಿ ಪಡೆದುಕೊಂಡಿಲ್ಲ. Memo of Arrest ಗೆ ನನ್ನ ಸಹಿ ಪಡೆದುಕೊಂಡಿಲ್ಲ. Chain of custody ಮಾಡಿಲ್ಲ. ಸ್ಥಳದಲ್ಲಿ ನಕಾಶೆಯನ್ನು ತಯಾರಿಸಿಲ್ಲ. ಸ್ಥಳದಲ್ಲಿ ವಿಡಿಯೋಗ್ರಾಫಿ ಮಾಡಿಲ್ಲ. ಆರೋಪಿತರಿಂದ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿಲ್ಲ, ನಾನು ಪೊಲೀಸ್ ಠಾಣೆಗೆ ಹೋಗಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ.

6. ಹರಿಹರದಲ್ಲಿ ಆರೋಗ್ಯ ಮಾತೆ ಚರ್ಚ್ ಇದೆ ಅಂದರೆ ನಿಜ. ಅಲ್ಲಿ ವರ್ಷದಲ್ಲಿ ವಾರಗಂಟಲೆ ಜಾತ್ರೆ ಆಗುತ್ತದೆ ಅಂದರೆ ನಿಜ. 3 ನೇ ಆರೋಪಿಯು ಆ ದಿನ ಚರ್ಚ್‌ಗೆ ಬಂದವರನ್ನು ಪೊಲೀಸರು ಅವರನ್ನು ಕರೆದುಕೊಂಡು ಹೋಗಿ ದಾಖಲಿಸಿ, ಪೊಲೀಸರು ಹೇಳಿದ ಹಾಗೆ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಡಾಬಾದ ಕಾನೆಶುಮಾರಿ ನಂಬರ ನನಗೆ ಗೊತ್ತಿಲ್ಲ ಹಾಗೂ ಅದು ಯಾವ ಸರ್ವೆ ನಂಬರನಲ್ಲಿದೆ ಅಂತ ನನಗೆ ಗೊತ್ತಿಲ್ಲ. ನಿಪಿ-3 ರ ಪೋಟೋದಲ್ಲಿ ಅದೇ ಭರಣಿ ಹೋಟೆಲ್ ಅಂತ ತೋರಿಸಲು ಯಾವುದೇ ಗುರುತು ಇಲ್ಲ ಅಂದರೆ ನಿಜ. ನಾನು ಹೇಳಿದ ರೀತಿಯಲ್ಲಿ ಯಾವುದೇ ಭರಣಿ ಹೋಟೆಲ್ ಇಲ್ಲ ಅಂದರೆ ಸುಳ್ಳು. ಆ ಪೋಟೋದಲ್ಲಿ ಇಂಡಿಯನ್ ಡಾಬಾ ಕಾಣುತ್ತಿಲ್ಲ ಅಂದರೆ ಉತ್ತರ ದಿಕ್ಕಿನಲ್ಲಿದೆ. ನಿಪಿ-3 ರಲ್ಲಿ ಪಪ್ಪಾಯ ತೋಟ ಕಾಣುತ್ತಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಭರಣಿ ಹೋಟೆಲ್ ನ ಪಕ್ಕದಲ್ಲಿ ಇದೆ. ನಾನು ಹೇಳಿದ ರೀತಿಯಲ್ಲಿ ಯಾವುದೇ ಪಪ್ಪಾಯ ತೋಟ ಇಲ್ಲ ಅಂದರೆ ಸುಳ್ಳು. ಮುದ್ದೆ ಮಾಲುಗಳನ್ನು ಆರೋಪಿತರಿಂದ ವಶಪಡಿಸಿಕೊಂಡಿದ್ದು ಸುಳ್ಳು ಅಂದರೆ ಸರಿಯಲ್ಲ. ಮು.ಮಾ.1 ರಿಂದ 7 ಯಾವುದು ಗಾಂಜಾ ಅಲ್ಲ ಅಂದರೆ ಸುಳ್ಳು.

**ಮರುವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.